ವ್ಯವಸ್ಥೆಗಾಗಿ ಐದುನೂರು ಲಕ್ಷ ಬಿಲ್ಲರೆಯ ಯೋಜನೆಯನ್ನು ತಯಾರುಪಡಿಸಿ ವಿಶ್ವಬ್ಯಾಂಕಿನಿಂದ ನೆರವು ಕೊಡುವಂತೆ ನಾವು ಕೇಳಿ ಕೊಂಡಿದ್ದೇವೆಂದು ಹೇಳುತ್ತಾರೆ. ನನಗೆ ಮಾಹಿತಿ ಲಭ್ಯವಿರುವಂತೆ ಸರ್ಕಾರದಿಂದ ಈ ಪ್ರಸ್ತಾವನೆ ಹೋಗಿದೆಯೇ ಎಂಬುದರ ಬಗ್ಗೆ ಯಾವ ತಾರೀಖಿಗೆ ಈ ಪ್ರಸ್ತಾವನೆ ತಮ್ಮ ಕೈಗೆ ಸೇರಿಕೊಂಡಿತು, ಈ ಪ್ರಸ್ತಾವನೆಯನ್ನು ತಾವು ವಿಶ್ವಬ್ಯಾಂಕಿನಿಂದ ಸಾಲವನ್ನು ಪಡೆಯುವುದಕ್ಕೆ ಯಾವ ಸಂದರ್ಭದಲ್ಲಿ ಕೇಳಿದ್ದೀರಿ ಎಂಬುದರ ಬಗ್ಗೆ ಮಾಹಿತಿಯನ್ನು ದಯಮಾಡಿ ಈ ಸಂದರ್ಭದಲ್ಲಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗ ವಿಶ್ವಬ್ಯಾಂಕಿಗೆ ಈ ಪ್ರಸ್ತಾವನೆ ಹೋಗಿದೆ. ಅದು ಯಾವಾಗ ಹೋಗಿದೆ, ಯಾವ ಹಂತದಲ್ಲಿದೆ ಎಂಬುದರ ಬಗ್ಗೆ ನಾನು ಮಾಹಿತಿಯನ್ನು ತರಿಸಿ ಹೇಳುತ್ತೇನೆ.

ಅಧ್ಯಕ್ಷರು : ಚಂದ್ರಕಾಂತ್ ಬೆಲ್ಲದ್‌ರವರೆ ತಾವು ಈ ಪ್ರಶ್ನೆಯನ್ನು ಬಿಟ್ಟು, ತಮ್ಮದೆ ಮುಂದಿನ ಪ್ರಶ್ನೆಯನ್ನು ಕೇಳಿ.....

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ : ದಯವಿಟ್ಟು ಈ ಒಳಚರಂಡಿಯದು ಬಹಳ ದೊಡ್ಡ ಸಮಸ್ಯೆ ಇದೆ, ಅಧ್ಯಕ್ಷರೆ, ಈಗಾಗಲೆ ನಾನು ಒಂದು ಪ್ರಶ್ನೆಯನ್ನು ಹಾಕಿದೆ ಅದಕ್ಕೆ ಲಿಖಿತ ಉತ್ತರವನ್ನು ಕಳುಹಿಸಿದ್ದಾರೆ. ಆ ಒಳಚರಂಡಿಯ ನೀರು ಬುಂಗಾಡಿನ ದೊಡ್ಡ ಕೆರೆಗೆ ಹೋಗುತ್ತಿದೆ. ಅದಕ್ಕೆ ನಾನು ಪರಿಸರ ಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದನಗೌಡರಿಗೂ ಸಹ ಕೇಳಿದ್ದೇನೆ. ಇಂತಹ ಒಂದು ಕೆರೆ ಅಲ್ಲಿದೆ ಒಳಚರಂಡಿಯ ನೀರೆಲ್ಲಾ ಅಲ್ಲಿಗೆ ಬಿಟ್ಟು ಬಿಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಹೇಗೆ?

ಅಧ್ಯಕ್ಷರು : ನೀವೆಲ್ಲಾ ಅದೇ ಜಿಲ್ಲೆಯವರು ನೀವು ಕುಳಿತು ಸರಿಮಾಡಿಕೊಳ್ಳಿ. ನೀವು ಅವರಿಗೆ ಈ ಬಗ್ಗೆ ಒಂದು ಸಪರೇಟ್ ನೋಟೀಸನ್ನು ಕಳುಹಿಸಿ.

ಧಾರವಾಡದಲ್ಲಿ ಬಾಲಭವನ ನಿರ್ಮಿಸುವ ಯೋಜನೆ

375 - ಶ್ರೀ ಚಂದ್ರಕಾಂತ ಜಿ. ಬೆಲ್ಲದ (ಧಾರವಾಡ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡದಲ್ಲಿ ಮಕ್ಕಳ ಸಲುವಾಗಿ ಒಂದು ಬಾಲಭವನ (ಉಪವನ ವಿವಿಧ ಆಟದ ಚಟುವಟಿಕೆ ಉದ್ಯಾನ) ನಿರ್ಮಿಸುವ ಯೋಜನೆ ಇದೆಯೆ?

ಆ) ಹಾಗಿದ್ದಲ್ಲಿ ಈಗ ಯಾವ ಹಂತದಲ್ಲಿ ಇದೆ?

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಸಚಿವರು) :

ಅ) ಹೌದು

ಆ) ಜಿಲ್ಲಾ ಪ್ರಾಧಿಕಾರ, ಧಾರವಾಡ ಇವರಿಂದ ಯೋಜನೆಗೆ ತಗಲುಬಹುದಾದ ವೆಚ್ಚವನ್ನೊಳಗೊಂಡಂತೆ ಪ್ರಸ್ತಾವನೆ ಪಡೆದು ಪರಿಶೀಲಿಸಲಾಗುವುದು.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ : ಮಾನ್ಯ ಅಧ್ಯಕ್ಷರೆ, ನಾವು 1984 ರಿಂದಲೂ ಈ ಧಾರವಾಡ ಜಿಲ್ಲೆಗೆ ಬಾಲಭವನಬೇಕೆಂದು ಕೇಳುತ್ತಿದ್ದೇವೆ. ಅಲ್ಲಿ ಮಕ್ಕಳ ಸಲುವಾಗಿ ಪ್ರಾಣಿಗಳ ಒಂದು ಸಫಾರಿ ಮತ್ತು ಪಕ್ಕದಲ್ಲಿ ಬೋಟಿಂಗ್ ಮಾಡುವಂಥ ಒಂದು ವ್ಯವಸ್ಥೆ ಇರುವಂಥ ಬಾಲಭವನ ಬೇಕಾಗಿದೆ. ಅದಕ್ಕೆ ಸರಿಯಾದಂಥ ಯೋಜನೆ ಏನು ಎಂಬುದನ್ನು ಇಲ್ಲಿಯವರೆಗೂ ತಾವು ತಿಳಿಸಲಿಲ್ಲ.

ಅದಕ್ಕೆ ಏನು ಕ್ರಮತೆಗೆದುಕೊಳ್ಳುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕೆಂದು ಸನ್ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿ ಬಾಲಭವನವನ್ನು 1985ರಲ್ಲಿ ಆ ಸಂಸ್ಥೆ ನೊಂದಾವಣೆಯಾಯಿತು. ಆಗಿನಿಂದಲೂ ಕೂಡ ಸಾಕ್ಷು ಜಿಲ್ಲೆಗಳಲ್ಲಿ ನಾವು ಈ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದೇವೆ. ಈಗ ಮೈಸೂರು, ಶಿವಮೊಗ್ಗ, ಮಡಿಕೇರಿ, ಮಂಗಳೂರು, ಗುಲ್ಬರ್ಗಾ, ಬೆಂಗಳೂರು ಹೀಗೆ ಒಟ್ಟು 6 ಜಿಲ್ಲೆಗಳಲ್ಲಿ ಮಕ್ಕಳಿಗೋಸ್ಕರ ಪುಟಾಣಿ ರೈಲುಗಳಿವೆ. ಮತ್ತೆ ಹೊಸದಾಗಿ ಈ ವರ್ಷ ಬೇರೆ ಬೇರೆ ಸೌಲಭ್ಯಗಳನ್ನು ಒದಗಿಸಿಕೊಡುವ ಸಲುವಾಗಿ ಧಾರವಾಡವೂ ಸೇರಿದಂತೆ ಎಲ್ಲಾ ಕಡೆಯಲ್ಲಿ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಮತ್ತೆ ಬೇಸಿಗೆ ಶಿಬಿರ ಇವೆಲ್ಲವನ್ನು ಐದು ಕೇಂದ್ರಗಳಲ್ಲಿ ನಡೆಸುತ್ತಿದ್ದೇವೆ. ಈಗ ತಾವು ಏನೇನು ಮಾಡಿದ್ದೀರಿ ಎಂದು ಕೇಳುತ್ತಿದ್ದೀರಿ. ಧಾರವಾಡದಲ್ಲಿ ಈಗ ಮಾಡುತ್ತಿದ್ದೇವೆ. ಈ ಎಲ್ಲಾ ಕಡೆ ಏನೇನು ಸೌಲಭ್ಯಗಳಿವೆ ಅವು ಧಾರವಾಡಕ್ಕೂ ಕೂಡ ಬರುತ್ತವೆ. ಈಗ ತಮಗೆ ಬೇಕು ಅಂದರೆ ಬೆಂಗಳೂರು ನಗರದಲ್ಲಿ ಏನೇನು ಇವೆ ಎಂಬುದನ್ನು ಹೇಳುತ್ತೇನೆ....

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳುವುದು, ಧಾರವಾಡ, ಬೆಂಗಳೂರು ನಗರದ ನಂತರ ಎರಡನೆಯ ದೊಡ್ಡ ಮಹಾನಗರ, ಎರಡು ವಿಶ್ವವಿದ್ಯಾಲಯಗಳು ಇರುವಂತಹ ಮಹಾನಗರ. ಇಂತಹ ಒಂದು ನಗರದಲ್ಲಿ ಬಾಲಭವನದ ಅಗತ್ಯತೆ ಇದೆ. 1985 ರಿಂದ ಪ್ರಯತ್ನ ಮಾಡಿದಂಥ ಈ ಬಾಲಭವನ ಎಲ್ಲಿಗೆ ಬಂದಿದೆ? ಉಳಿದ ಎಲ್ಲಾ ಕಡೆ ಪುಟಾಣಿ ರೈಲು ಬಂದಿದೆ, ಎಲ್ಲಾ ಸೌಲಭ್ಯಗಳನ್ನು ಉಳಿದ ಜಿಲ್ಲೆಗಳಿಗೂ ಕೊಟ್ಟಿದ್ದೀರಿ, ಬಹಳ ಸಂತೋಷ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಎರಹಾನಗರವಾದಂಥ ಧಾರವಾಡ ನಗರಕ್ಕೆ ಈ ಸೌಲಭ್ಯಗಳನ್ನು ಕೊಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ದಯವಿಟ್ಟು ಅದರ ಬಗ್ಗೆ ಉತ್ತರವನ್ನು ಕೊಡಬೇಕು.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಸಭಾಪತಿಗಳೇ, ಈಗ ಧಾರವಾಡದಲ್ಲಿ ನಾವು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಕಳುಹಿಸಿ ಎಂದು ತಿಳಿಸಿದ್ದೇವೆ, [illegible] ಯಾವ ಯಾವ ರೀತಿ ಕಟ್ಟಡಗಳನ್ನು ಕಟ್ಟುವುದಕ್ಕೆ ಮತ್ತು ಲೈಬ್ರರಿ ಮಾಡುವುದಕ್ಕೆ ಮತ್ತು ಬೇರೆ ಬೇರೆ ಅನುಕೂಲಗಳನ್ನು ಮಾಡಲು ಜಾಗ ಹೇಗಿದೆ, ಯಾವ ರೀತಿ ಮಾಡಬಹುದು ಎಂಬ ಬಗ್ಗೆ ಒಂದು ಪ್ರಸ್ತಾವನೆಯನ್ನು ಕಳುಹಿಸಿಕೊಡಿ ಎಂದು ಹೇಳಿದ್ದೇವೆ. ಅವರಿಂದ ಇನ್ನೂ ಬಂದಿಲ್ಲ. ಅದು ಬಂದಕೂಡಲೆ ನಾವು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ನೀವು ಮಂತ್ರಿ ಅಂದರೆ ನೀವೇ ಸರ್ಕಾರ. ನಾವು ಪ್ರಸ್ತಾವನೆಯನ್ನು ಕಳುಹಿಸುವುದಕ್ಕೆ ಹೇಳಿದ್ದೇವೆ ಅವರು ಇನ್ನೂ ಕಳುಹಿಸಿಲ್ಲ ಎಂದು ಹೇಳಿದರೆ ಅದು ಉತ್ತರ ಆಗುವುದಿಲ್ಲ. ಸನ್ಮಾನ್ಯ ಸದಸ್ಯರ ಅಭಿಪ್ರಾಯ ಏನೆಂದರೆ, ಇಡೀ ರಾಜ್ಯದಲ್ಲಿ ಬೆಂಗಳೂರು ಬಿಟ್ಟರೆ ಹುಬ್ಬಳ್ಳಿ-ಧಾರವಾಡ ಎರಡನೆ ಮಹಾನಗರವೆಂದು ಹೇಳುತ್ತಾರೆ. ದಯಮಾಡಿ ನಿಮ್ಮ ಅಧಿಕಾರವನ್ನು ಚಲಾಯಿಸಿ ಆ ತಕ್ಷಣ ಯಾವ ಯಾವ ಪ್ರಪೋಸಲ್ ಇದ್ದಾವೆ ಅವುಗಳನ್ನು ತರಿಸಿಕೊಂಡು ಬೆಂಗಳೂರಿಗೆ ಕೊಟ್ಟಿರುವಷ್ಟೇ ಪ್ರಾತಿನಿಧ್ಯವನ್ನು ಕೊಟ್ಟು ಅಲ್ಲಿ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಸಭಾಧ್ಯಕ್ಷರೆ, ಈಗ ಆರು ಜಿಲ್ಲೆಗಳಲ್ಲಿ ನಮ್ಮ ಅಧಿಕಾರವನ್ನು ಬಳಸಿ ಮಾಡಿಸಿದ್ದೇವೆ. ಧಾರವಾಡದಿಂದ ಇನ್ನು ಪ್ರಸ್ತಾವನೆ ಬಂದಿಲ್ಲ, ನಮ್ಮ ಪವರ್‌ಗೂ ಬೆಲೆ ಸಿಕ್ಕಿಲ್ಲ, ಈಗ ತಾವು ತರಿಸಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರು ಅದನ್ನೇ ಸ್ಪಷ್ಟ ಮಾಡಿದ್ದುದು. ಅಧಿಕಾರಿಗಳು ನೀವು ಹೇಳಿದಂಥ ಇಪ್ಪತ್ನಾಲ್ಕು ಗಂಟೆಯಲ್ಲಿ ಕೇಳಿದಂತಹ ಮಾಹಿತಿಯನ್ನು, ವರದಿಯನ್ನು ಕಳುಹಿಸುವಂತೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿ. ಈಗಲಾದರೂ ನಾನು ಒತ್ತಾಯ ಮಾಡುತ್ತೇನೆ. ನೀವು ಈ ಇಲಾಖೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತೀರಿ ಎಂಬ ವಿಶ್ವಾಸ ಇದೆ, ನಿಮ್ಮ ಕಾಲದಲ್ಲೂ ಆ ಉತ್ತರ ತರಿಸಿಕೊಳ್ಳದೆ ಇರುವಂಥ ಪರಿಸ್ಥಿತಿ ಬಂತಲ್ಲ ಎಂದು ನಮಗೆ ದುಃಖ ಆಗುತ್ತಿದೆ. ಇನ್ನು ಒಂದು ತಿಂಗಳಿನಲ್ಲಾದರೂ ವರದಿಯನ್ನು ತರಿಸಿಕೊಂಡು ಈ ವರ್ಷದ ಒಳಗಾಗಿ ಹಣವನ್ನು ಬಿಡುಗಡೆ ಮಾಡಿ, ಬೆಂಗಳೂರಿನಷ್ಟೆ ಹೆಚ್ಚಿನ ಆದ್ಯತೆಯನ್ನು ಹುಬ್ಬಳ್ಳಿ -ಧಾರವಾಡ ನಗರಕ್ಕೆ ಕೊಟ್ಟು ಕಾರ್ಯಕ್ರಮವನ್ನು ಮಾಡುತ್ತೀರೋ? ನಾವು ಅದನ್ನು ನಿಮ್ಮಿಂದ ನಿರೀಕ್ಷೆ ಮಾಡುತ್ತೇವೆ ಅಷ್ಟೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಸಭಾಧ್ಯಕ್ಷರೆ, ಈ ವರ್ಷದಲ್ಲಿ ಧಾರವಾಡಕ್ಕೋಸ್ಕರ ಆರು ಲಕ್ಷ ರೂಪಾಯಿಗಳ ಅನುದಾನವನ್ನು ಕಾಯ್ದಿರಿಸಿದ್ದೇವೆ. ಅದನ್ನು ಖರ್ಚು ಮಾಡುವುದಕ್ಕೆ ಅಲ್ಲಿಂದ ಸ್ವಲ್ಪ ಸಹಕಾರ ಸಿಕ್ಕಿಲ್ಲ. ಈಗ ನಾನು ಅಲ್ಲಿಗೇ ಹೋಗುತ್ತಿದ್ದೇನೆ, ದಯವಿಟ್ಟು ಅದನ್ನು ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಬಹುದು.

ಕರ್ನಾಟಕ ಗೃಹ ನಿರ್ಮಾಣ ಮಂಡಳಿ ವತಿಯಿಂದ ಕಟ್ಟಿಸಲಾದ ಮನೆಗಳು

1840 - ಶ್ರೀ ಎನ್. ಕೃಷ್ಣಪ್ಪ (ಬನ್ನೂರು) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬನ್ನೂರು ಪುರಸಭೆ ವ್ಯಾಪ್ತಿಯಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯು ಮನೆಗಳನ್ನು ಕಟ್ಟಿಸಿದೆಯೇ?

ಆ) ಹಾಗಿದ್ದಲ್ಲಿ ಮನೆಗಳನ್ನು ಕಟ್ಟಿಸಲು ಪಡೆದಿರುವ ಜಮೀನೆಷ್ಟು? ಹಾಗೂ ಇಲ್ಲಿಯವರೆಗೆ ಕಟ್ಟಿರುವ ಮನೆಗಳ ಸಂಖ್ಯೆ ಎಷ್ಟು? (ಪ್ರತಿಯೊಂದು ವರ್ಗಾವಾರು ವಿವರ ನೀಡುವುದು)

ಇ) ಈ ಮನೆಗಳನ್ನು ಹಂಚಿಕೆ ಆಗಿರುವ ಜನರ ಸಂಖ್ಯೆ ಎಷ್ಟು (ವರ್ಗಾವಾರು ವಿವರ ನೀಡುವುದು)

ಈ) ಈ ಮನೆಗಳನ್ನು ಪಡೆಯಲು ಜನರು ಮುಂದೆ ಬರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಬಸವರಾಜ್ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ಹೌದು

ಆ) 18.29 ಎಕರೆ

245 ಮನೆಗಳನ್ನು ನಿರ್ಮಿಸಲಾಗಿದೆ

ಆರ್ಥಿಕ ದುರ್ಬಲ ವರ್ಗ	-	70
ಅಲ್ಪ ಆದಾಯ ವರ್ಗ	-	75
ಮಧ್ಯಮ ಆದಾಯ ವರ್ಗ	-	100

ಇ) 208 ಮನೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

(ಆರ್ಥಿಕ ದುರ್ಬಲ ವರ್ಗ - 63